# 1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಎಸ್.ಸಿ. ನಂ. 163/2025

ದಿನಾಂಕ –21.07.2026

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | – | ಮರಳಪ್ಪ | ಪ್ರಾ.ಸಾ. | – | 02 |
| ಗಂಡನ ಹೆಸರು | – | ತಿಮ್ಮಪ್ಪ | ಚಾ.ಸಾ. | – | 02 |
| ವಯಸ್ಸು | – | 80 ವರ್ಷ | | | |
| ಉದ್ಯೋಗ | – | ವ್ಯವಸಾಯ | | | |
| ವಾಸ ಸ್ಥಳ | – | ಯದಘಟ್ಟ ಗ್ರಾಮ | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ಸರ್ಕಾರಿ ಅಭಿಯೋಜಕರಿಂದ –**

ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯು ನನ್ನ ಮಗನಾದ ಗಿರೀಶ್ ಈತನ ಪತ್ನಿ ಇರುತ್ತಾಳೆ. ಈ ಕೇಸಿನ ಚಾಸಾ–1 ನನ್ನ ಮಗಳು ಇರುತ್ತಾಳೆ. ಅದೇ ರೀತಿ ಈ ಕೇಸಿನ ಚಾಸಾ–8 ನನ್ನ ಮಗನಾದ ಗಿರೀಶ್ ಮತ್ತು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯ ಮಗನಿರುತ್ತಾನೆ. ಈಗ್ಗೆ 25 ವರ್ಷದ ಹಿಂದೆ ನನ್ನ ಮಗನಾದ ಮೃತ ಗಿರೀಶ್ ಈತನ ಮದುವೆಯನ್ನು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯೊಂದಿಗೆ ಜರುಗಿಸಿದ್ದು ಅವರ ವೈವಾಹಿಕ ಜೀವನದಿಂದ ಅವರಿಗೆ ಚಾಸಾ–8 ಆದ ಸುಮಂತ್ ಜನಿಸಿರುತ್ತಾನೆ. ನನ್ನ ಮಗನಾದ ಮೃತ ಗಿರೀಶ್ ಮತ್ತು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯ ಮಧ್ಯೆ ವಿವಾಹವಾದ ನಂತರ ಅವರಿಬ್ಬರೂ ಸುಖ ಸಂಸಾರ ನಡೆಸಿಕೊಂಡು ಹೋಗುತ್ತಿದ್ದರು. ಚಾಸಾ–1 ಆದ ನನ್ನ ಮಗಳ ವಿವಾಹವನ್ನು ಬಸವರಾಜಪ್ಪ ಎನ್ನುವವರೊಂದಿಗೆ ಜರುಗಿಸಿದ್ದು, ಆ ದಿನದಿಂದ ಅವಳು ಕೂಡ ಯಾದಘಟ್ಟ ಗ್ರಾಮದಲ್ಲಿ ವಾಸವಾಗಿರುತ್ತಾಳೆ.

2. ಈಗ್ಗೆ ಅಂದಾಜು 1 ವರ್ಷದ ಹಿಂದೆ ಒಂದು ದಿನ ರಾತ್ರಿ ಅಂದಾಜು 10.30 ಗಂಟೆ ಸಮಯದಲ್ಲಿ ನನ್ನ ಮಗನಾದ ಗಿರೀಶ್ ಈತನು ನನ್ನ ಮನೆಯ ಮುಂದೆ ಮರಣ ಹೊಂದಿ ಬಿದ್ದಿದ್ದು, ಆದರೆ ಆತನು ಹೇಗೆ ಮತ್ತು ಯಾವ ಕಾರಣದಿಂದ ಮರಣ ಹೊಂದಿದನೆಂದು ನನಗೆ ತಿಳಿಯಲಿಲ್ಲ. ಸದರಿ ವಿಷಯವಾಗಿ ನಾನು ಶ್ರೀರಾಂಪುರ ಪೋಲಿಸರ ಮುಂದೆ ಯಾವುದೇ ದಿನದಂದು ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷ್ಯವನ್ನು ನೀಡಿದ್ದು, ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಮಾನ್ಯ ಸರ್ಕಾರಿ ಅಭಿಯೋಜಕರು ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**– ಪಾಟೀ ಸವಾಲು – ಮಾನ್ಯ ಸರ್ಕಾರಿ ಅಭಿಯೋಜಕರಿಂದ –**

ದಿಃ 20.08.2025 ರಂದು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿದ್ದು, ಸದರಿ ಹೇಳಿಕೆಯಲ್ಲಿ ನನ್ನ ಮಗನಾದ ಗಿರೀಶ್ ಮತ್ತು ಆರೋಪಿಯ ಮಧ್ಯೆ ವಿವಾಹ ಜರುಗಿಸಿದ್ದು ಮತ್ತು ಅವರ ವೈವಾಹಿಕ ಜೀವನದಿಂದ ಚಾಸಾ–8 ಈತನು ಜನಿಸಿರುವನೆಂದು ಹೇಳಿರುವೆನೆಂದರೆ ಸರಿ. ಮುಂದುವರೆದು ಸದರಿ ಹೇಳಿಕೆಯಲ್ಲಿ ನನ್ನ ಮಗನಾದ ಗಿರೀಶನು ಒಂದೂ ದಿನಕ್ಕೂ ತನ್ನ ಸಂಸಾರ ಮತ್ತು ಜಮೀನು ಅಂತ ಕೆಲಸ ಮಾಡಿದವನಲ್ಲವೆಂದು ಹಾಗೂ ಆತನು ಅವರಿವರ ಜೆ ಸಿ ಬಿ ಮತ್ತು ಟ್ರಾಕ್ಟರ್ ಗಳನ್ನು ಬಾಡಿಗೆ ತಂದು ಮಣ್ಣು ಹೊಡೆಸುವ ಕೆಲಸ ಮಾಡಿಕೊಂಡು ಹೋಗುತ್ತಾ ಅದರಿಂದ ಬಂದ ಹಣವನ್ನು ಮನೆಗೂ ಕೊಡದೇ ಕುಡಿದು ಮೋಜು ಮಸ್ತಿ ಮಾಡುತ್ತಿದ್ದನೆಂದು ಮತ್ತು ಆ ರೀತಿ ಕುಡಿದು ಬಂದು ಹೆಂಡತಿ ಮತ್ತು ಮಗನೊಂದಿಗೆ ಗಲಾಟೆ ಮಾಡುವುದಲ್ಲದೇ ಯಾರದರೂ ಗಲಾಟೆ ಬಿಡಿಸಲು ಹೋದರೆ ಆತನು ಅವರ ಮೇಲೆಯೇ ಗಲಾಟೆ ಮಾಡುತ್ತಿದ್ದನೆಂದು, ಅದರಿಂದ ನಾವು ಮತ್ತು ಊರಿನವರೆಲ್ಲಾ ರೋಸಿ ಹೋಗಿದ್ದೆವೆಂದು, ಹಾಗೂ ಇತ್ತೀಚೆಗೆ ಜಮೀನಿನಲ್ಲಿ ಬೆಳೆದ ದಾಳಿಂಬೆ ಹಣ್ಣನ್ನು ಮಾರಾಟ ಮಾಡಿದ್ದರಿಂದ 5 ಲಕ್ಷ ಹಣ ಬಂದಿತ್ತೆಂದು ಮತ್ತು ನಮ್ಮ ಹಳೆಯ ಮನೆಯ ಪಕ್ಕದಲ್ಲಿ ಇನ್ನೊಂದು ಮನೆಯನ್ನು 5 ವರ್ಷದಿಂದ ಕಟ್ಟಿಸುತ್ತಿದ್ದು ಅದಕ್ಕೆ ಆರ್ ಸಿ ಸಿ ಹಾಕಿಸಬೇಕಾಗಿದ್ದು, ಅದಕ್ಕಾಗಿ ಹಣ ಬೇಕೆಂದು ನ್ಯಾಯಾಲಯದ ಮುಂದೆ ಹಾಜಾರಿರುವ ಆರೋಪಿಯಾದ ನನ್ನ ಸೊಸೆಯು ಆ ಹಣವನ್ನು ಚಾಸಾ–8 ಈತನ ಹೆಸರಿನಲ್ಲಿ ಬ್ಯಾಂಕ್ ನಲ್ಲಿ ಇಟ್ಟಿದ್ದಳೆಂದು, ಆ ಕಾರಣ ಆ ಹಣವನ್ನು ಬಿಡಿಸಿಕೊಡುವಂತೆ ಪ್ರತಿ ದಿನ ನನ್ನ ಮಗನಾದ ಗಿರೀಶನು ಕುಡಿದು ಬಂದು ಆರೋಪಿಯೊಂದಿಗೆ ಗಲಾಟೆ ಮಾಡುತ್ತಿದ್ದನೆಂದು, ಆದರೂ ಕೂಡ ಆರೋಪಿಯು ಆ ಹಣವನ್ನು ಬ್ಯಾಂಕ್ ನಿಂದ ಬಿಡಿಸಿಕೊಟ್ಟಲ್ಲಿ ತನ್ನ ಪತಿ ಹಾಳು ಮಾಡುವನೆಂದು ತಿಳಿದು ಆ ಹಣ ಬಿಡಿಸಿಕೊಟ್ಟಿರಲಿಲ್ಲ ವೆಂದು ಹಾಗೂ ಸದರಿ ವಿಷಯವಾಗಿ ಅನೇಕ ಬಾರಿ ನನ್ನ ಮಗನಿಗೆ ಬುದ್ದಿವಾದ ಹೇಳಿದ್ದೆವೆಂದು, ಈ ರೀತಿ ಇರುವಾಗ್ಗೆ ದಿಃ08.08.2025 ರಂದು ರಾತ್ರಿ 9.00 ಗಂಟೆ ಸಮಯದಲ್ಲಿ ನಾವೆಲ್ಲರೂ ಊಟ ಮಾಡಿ ನಂತರ ಚಾಸಾ–8 ದಾಳಿಂಬೆ ತೋಟಕ್ಕೆ ನೀರು ಹಾಯಿಸಲು ಹೋದನೆಂದು ಆಗ ನಾನು ಮತ್ತು ನನ್ನ ಸೊಸೆಯಾದ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ಮನೆಯ ಹೊರಗಡೆ ಕುಳಿತಿದ್ದೆವೆಂದು, ಈ ರೀತಿ ಇದ್ದಾಗ ರಾತ್ರಿ 10.30 ಗಂಟೆ ಸಮಾರಿನಲ್ಲಿ ನನ್ನ ಮಗ ಅಲ್ಲಿಗೆ ಬಂದು ನನ್ನ ಸೊಸೆಯಾದ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಗೆ ಅದರಗಿತ್ತಿ, ಬೋಸುಡಿ, ನಿನ್ನ ಮಗನನ್ನು ಕರೆಸೆ, ದುಡ್ಡು ಇಟ್ಟುಕೊಂಡು ಮಜಾ ಮಾಡಬೇಕೆಂದು ಅಂದುಕೊಂಡಿದ್ದೀರೆಂದು ಬೈಯಲು ಪ್ರಾರಂಭಿಸಿದ್ದು, ಆಗ ನಾನು ನನ್ನ ಸೊಸೆಗೆ ಏಕೆ ಬೈಯುತ್ತಿಯಾ ಎಂದು ಗಿರೀಶನನ್ನು ಕೇಳಿದೆನೆಂದು

,ಅದಕ್ಕೆ ಆತನು ನನ್ನನ್ನು ತಳ್ಳಾಡಿ ಕೆಳಗೆ ಬಿಳಿಸಿ ನನ್ನ ಮೇಲೆ ಕಲ್ಲು ಎತ್ತಿ ಹಾಕಲು ಮನೆಯ ಮೂಲೆಯಲ್ಲಿನ ಕಲ್ಲನ್ನು ಹುಡುಕುತ್ತಿದ್ದನೆಂದು ಆಗ ಆರೋಪಿಯಾದ ನನ್ನ ಸೊಸೆ ಪ್ರಭಾಳು ನನ್ನ ಕೈಯಲ್ಲಿದ್ದ ಊರುಕೋಲನ್ನು ತೆಗೆದುಕೊಂಡು ಗಿರೀಶನ ತಲೆಗೆ ಬಲವಾಗಿ ಹೊಡೆದು, ಕೋಲನ್ನು ಮನೆಯ ಪಕ್ಕದ ಗಿಡಗಳ ಪೊದೆಗೆ ಎಸೆದಳೆಂದು, ಆಗ ಗಿರೀಶನು ಮಕ್ಕಡೆ ಬಿದ್ದಿದ್ದು ಹಾಗೂ ಆತನು ಹೆಚ್ಚು ಕುಡಿದಿದ್ದರಿಂದ ಉಸಿರನ್ನು ತಿರುಗಿಸಿಕೊಳ್ಳಲು ಆಗುತ್ತಿರಲಿಲ್ಲವೆಂದು, ಆಗ ಆರೋಪಿಯಾದ ನನ್ನ ಸೊಸೆ ಪ್ರಭಾಳು ಮನೆಯ ಒಳಗೆ ಇಟ್ಟಿದ್ದದ ದಾಳಿಂಬೆ ಗಿಡಗಳಿಗೆ ಹೊಡೆಯುವ ಔಷಧಿ ಬಾಟಲಿಗಳನ್ನು ತಂದು ಗಿರೀಶನಿಗೆ ಕುಡಿಸಿ ಆತನನ್ನು ಸಾಯಿಸಿದಳೆಂದು, ಅದನ್ನು ನೋಡಿದ ನಾನು ಭಯವಾಗಿ ತಕ್ಷಣ ಚಾಸಾ–1 ಇವರ ಮನೆಗೆ ಹೋಗಿ ಅವಳಿಗೆ ವಿಷಯವನ್ನೆಲ್ಲಾ ತಿಳಿಸಿ, ನಂತರ ನನ್ನ ಮನೆಯ ಬಳಿ ಚಾಸಾ–1 ಇವರೊಂದಿಗೆ ವಾಪಸ್ಸು ಬಂದೆನೆಂದು ಆ ಬಗ್ಗೆ ದಿಃ09.08.2025 ರಂದು ಚಾಸಾ–1 ಇವರು ಪೋಲಿಸರ ಮುಂದೆ ದೂರು ಕೊಟ್ಟಿರುವಳೆಂದು, ಈಗ ಓದಿ ಹೇಳಲಾದ ನಿಪಿ–8 ರಂತೆ ನಾನು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿರುವೆನೆಂದರೆ ಸರಿಯಲ್ಲ.

ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯು ನನ್ನ ಮಗನಾದ ಗಿರೀಶನ ಪತ್ನಿ ಇದ್ದು, ಅವಳು ನನ್ನ ಸೊಸೆ ಇದ್ದು ಮತ್ತು ನಾನು ಪೋಲಿಸರ ಮುಂದೆ ನಿಪಿ–8 ರಂತೆ ಆರೋಪಿಯ ವಿರುದ್ದ ಹೇಳಿಕೆ ನೀಡಿದ್ದು ಆದರೂ ಕೂಡ ಈಗ ಸಹಾಯ ಆರೋಪಿಗೆ ಸಹಾಯ ಮಾಡಲು ಘಟನೆಯ ಬಗ್ಗೆ ನನಗೆ ಏನೂ ಗೊತ್ತಿಲ್ಲವೆಂದು ಮತ್ತು ನಿಪಿ–8 ಎಂದು ಗುರುತಿಸಿದ ಹೇಳಿಕೆಯನ್ನು ನಾನು ಪೋಲಿಸರ ಮುಂದೆ ಕೊಟ್ಟಿಲ್ಲವೆಂದು ಹಾಗೂ ನನ್ನ ಮಗ ಯಾವ ಕಾರಣಕ್ಕಾಗಿ ಮರಣ ಹೊಂದಿದನೆಂದು ನನಗೆ ಗೊತ್ತಿಲ್ಲವೆಂದೂ, ಈ ದಿನ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿರುವೆನೆಂದರೆ ಸರಿಯಲ್ಲ. ಈ ಕೇಸಿನಲ್ಲಿ ಕಾಣಿಸಿರುವ ಘಟನೆಯ ಬಗ್ಗೆ ನನಗೆ ಎಲ್ಲಾ ಮಾಹಿತಿ ಇದ್ದು, ಆದರೂ ಕೂಡ ನನಗೆ ಏನೂ ಗೊತ್ತಿಲ್ಲವೆಂದು ಈಗ ಆರೋಪಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿರುವೆನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂ.ಯು ವಕೀಲರಿಂದಃ**

ವಕೀಲರು ಹಾಜರಿದ್ದು ಪಾಟೀ ಸವಾಲು ಇಲ್ಲವೆಂದು ಹೇಳಿರುತ್ತಾರೆ.

ಮರು ವಿಚಾರಣೆ – ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)
ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.